## ನಂದೀದುರ್ಗದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

ಸ್ ೧೮೯೬—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 1.

ಮೃತಪಟ್ಟ ನಾಗನಾಯಕರ ಆಸ್ತೀ ವಿಷಯದಲ್ಲಿ—

ಗುಬ್ಬೀ ತಾಲ್ಲೂಕು ಕಲ್ಲೂರು ಸಮ್ಮತು ಜಾಕೇನಹಳ್ಳಿಯಲ್ಲಿ ಇರುವ ಶಿದ್ದಲಿಂಗನಾಯಕರು, ಮೃತಪಟ್ಟ ಸದರೀ ನಾಗನಾಯಕರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಜಾಕೇನಹಳ್ಳಿ ಸ್ಥಳದ ಶಿದ್ದಲಿಂಗನಾಯಕರು, ಜಾಕೇನಹಳ್ಳಿ ವಾಸಸ್ಥರಾಗಿ ಮೃತಪಟ್ಟ ನಾಗನಾಯಕರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿದ್ದಲಿಂಗನಾಯಕರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಆಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗನಾಯಕರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೮೯೬ನೇ ಇಸವಿ ಜುಲೈ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟ್ ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

---

ಸ್ ೧೮೯೫—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 445.

ಮೃತಪಟ್ಟ ಕೃಷ್ಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಾಗಡೀ ತಾಲ್ಲೂಕು ಕಸಬಾದಲ್ಲಿರುವ ರಾಮಕಟ್ಟರು, ಮೃತಪಟ್ಟ ಸದರೀ ಕೃಷ್ಣಯ್ಯನವರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡೀ ಸ್ಥಳದ ರಾಮಕಟ್ಟರು. ಮಾಗಡಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಕಟ್ಟರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಆಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

---

ಸ್ ೧೮೯೫—96ನೇ ಇಸವಿ ಮಿ॥ ಅರ್ಜೀ ನಂಬರ್ 446.

ಮೃತಪಟ್ಟ ಶಾಮರಾಯರ ಆಸ್ತೀವಿಷಯದಲ್ಲಿ—

ಅರ್ಜೀದಾರ್ರು ಹೊಸಕೋಟೆ ಕಸಬಾದಲ್ಲಿರುವ ಅಪ್ಪೂರಾಯರು, ಮೃತಪಟ್ಟ ಸದರೀ ಶಾಮರಾಯರಿಗೆ ಅಣ್ಣನಮಗನು ಆಗಬೇಕೆಂಬ ಹಕ್ಕುದಾರಿ ನೇಲೆ ಹೊಸಕೋಟೇ ಸ್ಥಳದ ಅಪ್ಪೂರಾಯರು, ಹೊಸಕೋಟೇ ವಾಸಸ್ಥರಾಗಿ ಮೃತಪಟ್ಟ ಶಾಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಪ್ಪೂರಾಯರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಆಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೮೯೬ನೇ ಇಸವಿ ಜುಲೈ ತಿಂಗಳ 22ನೇ ತಾರೀಖಿನಲ್ಲಿ ಕೋರ್ಟ್ ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

---

## ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

### ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ವೆಸ್ಟ್ರ್ ಎಕ್ಸ್‌ಟೆರ್ಷ ಮುಹಮ್ಮದ್ ಕಮ್ಯೂನಿಟೀಗೆ ಸೇರಿದ ಈ ಕೆಳಗೆ ನಮೂಬಿಸುವ ಅಳತೆಗಳುಳ್ಳ 10 ಹತ್ತು ತಾಕುಗಳು ಚಾಲತಿ ಇಸವಿ ಆಗಸ್ಟ್ 8ನೇ ತಾರೀಖು ಪ್ರಾತಃಕಾಲ 7½ ಘಂಟೆಗೆ ಪಿಟೋ ಜಾಗಾದ ಬಳಿಯಲ್ಲೇ ಹರಾಜುಮಾಡಿಸಲ್ಪಡುತ್ತೆಯಾಗಿ ಇಷ್ಟ್ರವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳಬಹುದು:—

2. ಸವಾಲ್ ಖೈದಾದ ಕೂಡ್ಲೆ ಛಡಸವಾಲ್‌ದಾರ್ರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಹಿಸ್ಸೆಯನ್ನ ಡಿಪಾಜಿಟ್ಟಾಗಿ ಹಾಜರ್‌ಮಾಡಿ ಮಂಜೂರೀ ಆರ್ಡರ್ ಕೊಟ್ಟ 7 ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರಶೀತಿ ಪಡದು ಜಮ್ಮಿ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದುಮಾಡಿಕೊಂಡ 6 ತಿಂಗಳೊಳಗಾಗಿ ಕಟ್ಟಡವನ್ನ ಕಟ್ಟಿ ಪೂರೈಸಬೇಕು. ಕಾವುಗಾರಿಗೆ ಕ್ರಮವಾಗಿ ಪ್ಲಾನ್ ಹಾಜರ್ಮಾಡಿ ಲೈಸೆನ್ಸು ಪಡದುಕೊಳ್ಳಬೇಕು. ಹಾಗೆ ಕಟ್ಟಡವನ್ನ ಕಟ್ಟಿಕೊಳ್ಳದೆ ತಪ್ಪಿಹೋದಲ್ಲಿ ಲುಕ್ಸಾನಿಗೆ ಯಾವ ಈಡೂ ಇಲ್ಲದೆ ನಿವೇಶನವನ್ನ ಬೋರ್ಡಿಗೆ ಕೇರಿಸಿಕೊಂಡು ಹರಾಜು ಮಾಡಿಸಲ್ಪಡುವದು.